ಬೆಟ್ಟಹಳ್ಳಿ ಗೋಪಿನಾಥ್, ಸೂಲಿಬೆಲೆ
*ಮೂರ್ಖತನ ಹಾಗೂ ಬುದ್ಧಿವಂತಿಕೆಯ ಪರಮಾವಧಿ ಯಾವುದು?*



ರಾಹುಲ ಮತ್ತು ದೊಡ್ಡಗೌಡರು ಅದರ ಬಗ್ಗೆಯೇ ಚಿಂತಿಸುತ್ತಿದ್ದಾರೆ.

ಬಿ.ಎಸ್. ನಾರಾಯಣಸ್ವಾಮಿ, ಸಮೇತನಹಳ್ಳಿ
*ಹುಡುಗಿಯರ ಮನದಲ್ಲಿ ಶಾಶ್ವತವಾಗಿ ಉಳಿದುಕೊಳ್ಳಬೇಕಾದರೆ ಹುಡುಗರು ಏನು ಮಾಡಬೇಕು?*
ಅವರು ಹೇಳಿದ್ದೆಲ್ಲವನ್ನೂ ಚಾಚೂ ತಪ್ಪದೆ ಮಾಡಬೇಕು.

ಪಿ.ಜಿ. ರಾಘವೇಂದ್ರ, ಮೈಸೂರು
*ಒಂದು ಬಹುಮಾನಿತ ಪ್ರಶ್ನೆ. ಪುತ್ರಶೋಕಂ ನಿರಂತರಂ. ಪುತ್ರಿಶೋಕಂ?*
ಅಬಾರ್ಷನ್; ಚೈಲ್ಡ್ ಮಾರ್ಟಲಿಟಿ; ಡೌರಿ ಡೆತ್ ಮಾದರಿಗಳೊಳ್ ತ್ರಿವಿಧ ಶೋಕಂ.

ನಾಗವೇಣಿ ಸೋಮಶೇಖರ್, ಮೈಸೂರು
*ಕರಡಿಗೆ ಮೊಸರನ್ನ ಇಷ್ಟ ಎನ್ನುವರಲ್ಲ, ಕಾಡಿನಲ್ಲಿರುವ ಕರಡಿಗೆ ಮೊಸರನ್ನ ಹೇಗೆ ಗೊತ್ತು?*




ಜಂಗಲ್ ಪಿಕ್‌ನಿಕ್ ಹೋಗುವವರು ಒಯ್ಯುವುದೇ ಬಿಸಿಬೇಳೆಬಾತ್, ಮೊಸರನ್ನ; ಅಲ್ಲಲ್ಲಿ ಇಟ್ಟಿದ್ದು, ಬಿಟ್ಟಿದ್ದು ತಿಂದಿರತ್ತೆ.

ಡಿ. ದೊಡ್ಡಲಿಂಗೇಗೌಡ, ಕೊಳ್ಳೇಗಾಲ
*ಸತ್ತಮೇಲೆ ಗಂಡುಮಕ್ಕಳು ತಂದೆತಾಯಿಗಳಿಗೆ ಸ್ವರ್ಗ ಕಾಣಿಸುವರಂತೆ. ನಿಜವೆ?*
ಬದುಕನ್ನು ಅಷ್ಟು ನರಕ ಮಾಡುವುದರಿಂದ ಸಾವು ಸ್ವರ್ಗದಂತೆ ಕಾಣುವುದಂತೆ.

ಶಿವು, ದೇಶವಳ್ಳಿ
*ಸದಾ ತಮ್ಮನ್ನು ತಾವೇ ಹೊಗಳಿಕೊಳ್ಳುವವರಿಗೂ, ಪರರನ್ನು ಹೊಗಳುವವರಿಗೂ ಇರುವ ವ್ಯತ್ಯಾಸವೇನು?*
ಒಬ್ಬನದು ಸೆಲ್ಫ್ ಸರ್ವೀಸ್; ಇನ್ನೊಬ್ಬನದು ಡಿಸ್ಟ್ರಿಬ್ಯೂಷನ್ ಏಜೆನ್ಸಿ.

ಕೆ.ಎಂ. ಲಿಂಗರಾಜು, ನಂಜನಗೂಡು
*ಕ್ಷುಲ್ಲಕ ರಾಜಕೀಯವನ್ನು ಯಾರಿಂದ ಕಲಿಯಬಹುದು?*
ರಾಜಕೀಯವೆಂದರೇ ಕ್ಷುಲ್ಲಕ ಎಂದಾಗಿದೆ. ಒಂದೇ ಶಬ್ದ ಎರಡು ಸಲ ಬಳಸಬೇಡಿ.

ಮಹಾಂತಯ್ಯ ಕೆ. ಮಠ, ಅಫಜಲಪುರ
*ದೃಷ್ಟಿಗೂ, ಸೃಷ್ಟಿಗೂ ಇರುವ ವ್ಯತ್ಯಾಸವೇನು?*
ಕಾಲ ಕಳೆದಂತೆ ದೃಷ್ಟಿ ಸರಿ ಇರಲು ಆಪರೇಶನ್ ಅಗತ್ಯ; ಸೃಷ್ಟಿ ಸರಿ ಇರಲು ಕೋಆಪರೇಶನ್ ಅಗತ್ಯ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಹೆಣ್ಣಿನ ಮನ ಮುಗಿಲು, ಕಣ್ಣು ಕಡಲು ಎನ್ನುವುದೇಕೆ ರಾಮ್‌ಜೀ?*
ಗುಣವಿಶೇಷ; ಮನ, ಮುಗಿಲು ಎರಡೂ ಕ್ಷಣಕ್ಷಣಕ್ಕೂ ಬದಲಾಗುತ್ತವೆ; ಕಣ್ಣು, ಕಡಲು ಎರಡರದೂ ಒಂದೇ ಪ್ರಾಡಕ್ಟ್ – ಉಪ್ಪುನೀರು!

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
*ರಾಮನೊಂದಿಗೆ ಸೀತೆ ಕಾಡಿಗೆ ಹೋದಂತೆ ಊರ್ಮಿಳೆ ಲಕ್ಷ್ಮಣನೊಂದಿಗೆ ಕಾಡಿಗೆ ಏಕೆ ಹೋಗಲಿಲ್ಲ?*
ಅವಳಿಗೆ ಡಸ್ಟ್ ಅಲರ್ಜಿ ಇತ್ತಂತೆ.

ಎಂ.ಎ. ಕುಮಾರ್, ಬೆಂಗಳೂರು
*ಸಂಸಾರದಲ್ಲಿ ಸಮಸ್ಯೆ ಹುಟ್ಟಿದ್ದು ಗಂಡಿನಿಂದಲೋ, ಹೆಣ್ಣಿನಿಂದಲೋ?*
ಮಗುವಿನಿಂದ. ರಚ್ಚೆ ಹಿಡಿದ ಮಗುವನ್ನು ಸಮಾಧಾನಗೊಳಿಸುವುದೇ ಸಂಸಾರದ ಮೊಟ್ಟಮೊದಲ ಸಮಸ್ಯೆ.

ಎಂ.ಜಿ. ಚನ್ನಪ್ಪಸ್ವಾಮಿ, ಭದ್ರಾವತಿ
*ಹುಡುಗ-ಹುಡುಗಿಯರು ರಕ್ತದಲ್ಲೇ ಪ್ರೇಮಪತ್ರ ಬರೆಯಲು ಕಾರಣ?*
ಪೆನ್ ತೊಗೊಂಡು ಹೋಗೋದನ್ನ ಮರೆತುಬಿಟ್ಟಿರುತ್ತಾರೆ.

ಎ.ಕೆ. ಪಟ್ಟಾಭಿ, ಬೆಂಗಳೂರು
*ಪ್ರಜೆಗಳ ಸೇವೆ ಮಾಡಲು ಖಾದಿ, ಖಾಕಿ, ಕಾವಿ ಇವುಗಳಲ್ಲಿ ಯಾವುದು ಶ್ರೇಷ್ಠ?*
ಸೇವೆಗೆ ಸಮವಸ್ತ್ರವೂ ಅಗತ್ಯವಿಲ್ಲ, ವಸ್ತ್ರವೂ ಅಗತ್ಯವಿಲ್ಲ ಎಂಬುದಕ್ಕೆ ಗಾಂಧೀಜಿಯೇ ಸಾಕ್ಷಿ.

## ಬಹುಮಾನಿತ ಪ್ರಶ್ನೆ

ಆರ್. ಮಧುಸೂದನ್, ಹಾಸನ
*ನಮ್ಮ ಪ್ರೇಮ ಶಾಶ್ವತವಾಗಿರಲು ಅವಳಿಗೆ ನನ್ನ ಹೃದಯದ ಯಾವ ಮೂಲೆಯಲ್ಲಿ ಸ್ಥಾನ ನೀಡಲಿ?*
ಕುಬೇರನ ಮೂಲೆಯಲ್ಲೇ; ತಪ್ಪಿದರೆ ಅವಳು ಅಗ್ನಿಮೂಲೆ ಸೇರಿ ನಿಗಿನಿಗಿಸುವಳಲ್ಲ!

ಎಂ.ಎನ್. ಸೋಮಶೇಖರ್, ಮೈಸೂರು
*ಮನೆತುಂಬ ಕನ್ನಡಿಗಳನ್ನು ಹಾಕಿದರೆ ತುಂಬ ಒಳ್ಳೆಯದಂತೆ. ಏಕೆ ರಾಮ್‌ಜೀ?*
ಹೆಣ್ಣು ಕನ್ನಡಿಯಲ್ಲೇ ತಲ್ಲೀನಳಾಗುವುದರಿಂದ ಗಂಡಿಗೆ ಬೈಗುಳ ತಪ್ಪುವುದಂತೆ.

ಎಂ.ಆರ್. ಮುಕುಂದ, ಬೆಂಗಳೂರು
*ಧೂಮಪಾನ, ಮದ್ಯಪಾನ, ಪ್ಲಾಸ್ಟಿಕ್ ಇತ್ಯಾದಿಗಳ ಬಳಕೆ ನಿಷಿದ್ಧ ಎನ್ನುವ ಸರ್ಕಾರ ಅವುಗಳ ತಯಾರಿಕೆ ರದ್ದು ಮಾಡಬಾರದೇಕೆ?*
ಪ್ರಯೋಜನವಿಲ್ಲ. ಬೀಗ ಬಾಗಿಲಿಗೆ, ಭೋಗ ಕಳ್ಳಸಂತೆ ವ್ಯಾಪಾರಿಗೆ ಆಗತ್ತಷ್ಟೆ.

ಬಿ. ಚಂದ್ರೇಗೌಡ, ಬೆಂಗಳೂರು
ಎಚ್.ಆರ್. ದೇಸಾಯಿ, ರಾಯಚೂರು
*ಇಷ್ಟು ಜನ ವಂಚಕರು, ಡಕಾಯಿತರು, ಸರಗಳ್ಳರು, ಕೊಲೆಗಡುಕರ ಮಧ್ಯೆ ನಾವು*



*ಸಜ್ಜನರಾಗಿ ಬದುಕಲು ಸಾಧ್ಯವೆ?*
ಸಾಧ್ಯ. ಸಾವಿರ ಟನ್ ತುಕ್ಕು ಹಿಡಿದ ಕಬ್ಬಿಣದ ಮಧ್ಯೆಯೂ ಚಿನ್ನ ಚಿನ್ನವೇ.

*ಸತ್ತವನನ್ನು ಸ್ವರ್ಗಸ್ಥನಾದ ಅಂತ ಯಾವ ಗ್ಯಾರಂಟಿ ಮೇಲೆ ಹೇಳ್ತಾರೆ?*
ಭೂತಲೋಕ ಕೆಟ್ಟು ಕೆರಹಿಡಿದು ನರಕವಾಗಿರುವುದರಿಂದ.

ಹಾಡ್ಯ ಬ. ಜಯಾನಂದ, ಮೈಸೂರು
*ರಾಮನ ಪ್ರೇಮಕ್ಕೂ, ಕೃಷ್ಣನ ಪ್ರೇಮಕ್ಕೂ ಏನು ವ್ಯತ್ಯಾಸ?*
ರಾಮನ ಪ್ರೇಮ ಮನನೀಯ; ಕೃಷ್ಣನ ಪ್ರೇಮ ರಮಣೀಯ.

■ ರಾಮ್